

ಬಿಪ್ಲವ್ ಕುಮಾರ್ ದೇವ್ ತ್ರಿಪುರಾದ ನಿಯೋಜಿತ ಸಿಎಂ 10

ಐಎನ್ಎಕ್ಸ್ ಮೀಡಿಯಾ ಪ್ರಕರಣ: ಕಾರ್ತಿ ಮತ್ತೆ 3ದಿನ ಸಿಬಿಐ ಕಸ್ಟಡಿಗೆ 9

ಲೋಕಹಿತಂ ಮಮ ಕರಣೀಯಂ

ಎದೆಗೆ ಚೂರಿ ಇರಿದರೂ ನಕ್ಸಲರನ್ನು ಮಣ್ಣುಮುಕ್ಕಿಸಿದ ಯೋಧ 10

10 ಖೇಣಿ ಸೇರ್ಪಡೆ ಮೂಲಕ ಭ್ರಷ್ಟಾಚಾರ ಸ್ವಾಗತಿಸಿದ ಕಾಂಗ್ರೆಸ್

ಮಂಗಳೂರು
ಬುಧವಾರ
7 ಮಾರ್ಚ್ 2018
ಹೇಮಲಂಬಿ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ ನಕ್ಷತ್ರ:ವಿಶಾಖೆ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ HD

ಸಂಪುಟ 39, ಸಂಚಿಕೆ 340, ಪುಟಗಳು 14+4+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kodialbail


Sahyadri College of Engineering ... CENTRAL LIBRARY Mangalore

# ಮಾ.9: ಸಹ್ಯಾದ್ರಿಯಲ್ಲಿ ವಿಜ್‌ಕ್ವಿಜ್ 2018 ಸಂಭ್ರಮ

ದಿಗಂತ ವರದಿ: ಮಂಗಳೂರು, ಮಾ.6

ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಎಂಬಿಎ ವಿಭಾಗದ ವತಿಯಿಂದ ಮಾರ್ಚ್ 9ರಂದು ಸಹ್ಯಾದ್ರಿ ವಿಜ್‌ಕ್ವಿಜ್ 2018 ಗ್ರ್ಯಾಂಡ್ ಫಿನಾಲೆಯನ್ನು ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಎಂಬಿಎ ವಿಭಾಗದ ನಿರ್ದೇಶಕಿ ಡಾ.ವಿಶಾಲ್ ಸಮರ್ಥ, ಮಾ.9ರ ಪೂರ್ವಾಹ್ನ 9.30ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದ್ದು,ಎಚ್‌ಡಿಎಫ್‌ಸಿ ಕರ್ನಾಟಕ ಮತ್ತು ಗೋವಾ ವ್ಯವಹಾರ ವಿಭಾಗದ ಮುಖ್ಯಸ್ಥ ಕಾಮಕಾಯ ಪ್ರಸಾದ್ ಅಗರ್ ವಾಲ್ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದರು.

ಕಾಲೇಜು ಹಂತ ಮತ್ತು ಸಹ್ಯಾದ್ರಿ ಕ್ಯಾಂಪಸ್ ಗ್ರ್ಯಾಂಡ್ ಫಿನಾಲೆ ಎಂಬ ಎರಡು ಹಂತಗಳಲ್ಲಿ ಸಹ್ಯಾದ್ರಿ ವಿಜ್‌ಕ್ವಿಜ್ ನಡೆಯಲಿದೆ. ಈಗಾಗಲೇ ಮಂಗಳೂರು, ಉಡುಪಿ, ಕೊಡಗು, ಕಾರವಾರ ಮತ್ತು ಕಾಸರಗೋಡು ವಿಭಾಗದ ಸುಮಾರು 60 ಪದವಿ ಕಾಲೇಜುಗಳಲ್ಲಿ ಕಾಲೇಜು ಹಂತದ ವಿಜ್‌ಕ್ವಿಜ್ ನಡೆದಿದೆ.

ಅಂತಿಮ ಪದವಿಯ ಮೂರು ವಿದ್ಯಾರ್ಥಿಗಳನ್ನೊಳಗೊಂಡ ಒಂದು ತಂಡದಂತೆ ಸುಮಾರು 7 ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಇವರಲ್ಲಿ ಆಯ್ಕೆಯಾದ ಸುಮಾರು 950 ವಿದ್ಯಾರ್ಥಿಗಳು ಮಾ.9ರಂದು ನಡೆಯುವ ಗ್ರ್ಯಾಂಡ್ ಫಿನಾಲೆಯಲ್ಲಿ ಭಾಗವಹಿಸುವರು. ವಿಜೇತರು ಪ್ರಥಮ ರೂ.25 ಸಾವಿರ, ದ್ವಿತೀಯ 15 ಸಾವಿರ ಮತ್ತು ತೃತೀಯ 10 ಸಾವಿರ ನಗದನ್ನು ಬಹುಮಾನವಾಗಿ ಪಡೆಯಲಿದ್ದಾರೆ ಎಂದವರು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಜ್‌ಕ್ವಿಜ್ ಸಂಯೋಜಕಿ ಪ್ರೊ.ಗಾಯತ್ರಿ ಶೆಟ್ಟಿ, ಉಪ ಸಂಯೋಜಕರಾದ ಪ್ರೊ.ರಮೇಶ್ ಕೆ.ಜಿ., ಪ್ರೊ.ಪದ್ಮನಾಭ ಬಿ ಉಪಸ್ಥಿತರಿದ್ದರು.

THE NEW
# INDIAN EXPRESS
MANGALURU • WEDNESDAY • MARCH 7, 2018 • ₹5.00 • PAGES 18 • CITY EDITION



Sahyadri College of Engineering & Management
CENTRAL LIBRARY

### Sahyadri Whiz Quiz

Mangaluru:Grand Finale of Whiz Quiz of Sahyadri College of Engineering nad Management will be held on March 9 at 9.30 am in the college campus. Around 7,000 students participated in the first round of quiz, out of which 950 students are selected for final round of quiz. First three winners will get cash prizes of Rs 25,000, Rs 15,000 and Rs 10,000 respectively.

ಬುಧವಾರ, ಮಾರ್ಚ್ 7, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 66 | ಪುಟ 22 + 2 + 4 • www.prajavani.net /prajavani.net
# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
'ಒತ್ತಡ' ಎಂಬ ಮೂರಕ್ಷರದ ಪದವೇ ಒತ್ತಡದ ಅನುಭವವನ್ನು ಉಂಟು ಮಾಡುತ್ತದೆ!

CENTRAL LIBRARY

### ಸಹ್ಯಾದ್ರಿ ವಿಜ್‌ಕ್ವಿಜ್ ಗ್ರಾಂಡ್ ಫಿನಾಲೆ

ಮಂಗಳೂರು: ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಎಂಬಿಎ ವಿಭಾಗದ ವತಿಯಿಂದ ಸಹ್ಯಾದ್ರಿ ವಿಜ್‌ಕ್ವಿಜ್ 2018 ಗ್ರಾಂಡ್ ಫಿನಾಲೆ ಕಾಲೇಜಿನಲ್ಲಿ ನಡೆಯಲಿದೆ ಎಂದು ಎಂಬಿಎ ವಿಭಾಗದ ನಿರ್ದೇಶಕಿ ಡಾ.ವಿಶಾಲ್ ಸಮರ್ಥ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾರ್ಯಕ್ರಮದ ಉದ್ಘಾಟನೆಯನ್ನು ಎಚ್‌ಡಿಎಫ್‌ಸಿ ಕರ್ನಾಟಕ ಮತ್ತು ಗೋವಾ ವ್ಯವಹಾರ ವಿಭಾಗದ ಮುಖ್ಯಸ್ಥ ಕಾಮಕಾಯ ಪ್ರಸಾದ್ ಅಗರ್ವಾಲ್ ಮಾಡಲಿದ್ದಾರೆ. ಕಾಲೇಜು ಹಂತ ಮತ್ತು ಸಹ್ಯಾದ್ರಿ ಕ್ಯಾಂಪಸ್ ಗ್ರಾಂಡ್ ಫಿನಾಲೆ ಎಂಬ ಎರಡು ಹಂತಗಳಲ್ಲಿ ಸಹ್ಯಾದ್ರಿ ವಿಜ್‌ಕ್ವಿಜ್ ನಡೆಯಲಿದೆ' ಎಂದರು.

ವಿಜ್‌ಕ್ವಿಜ್ ಸಂಯೋಜಕಿ ಪ್ರೊ. ಗಾಯತ್ರಿ ಶೆಟ್ಟಿ, ಉಪ ಸಂಯೋಜಕರಾದ ಪ್ರೊ. ರಮೇಶ್ ಕೆ.ಜಿ., ಪ್ರೊ.ಪದ್ಮನಾಭ ಬಿ ಇದ್ದರು.

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM | MANGALURU | WEDNESDAY, MARCH 7, 2018 | PAGES 24 | PRICE ₹ 4.50
# THE TIMES OF INDIA
INCLUDES *4 PAGES OF MANGALORE TIMES (*MANGALURU, MANIPAL AND UDUPI CITY AREAS ONLY)

**Quiz competition:** The department of business administration of Sahyadri College of Engineering and Management will organize the 'Sahyadri Whiz Quiz' competition on March 9. It will be held at the college campus. The event is for undergraduates.

VACATION / REGULAR CLASSES
(STATE / CBSE / ICSE)
V TO DEGREE- ALL SUBJECTS
CET, NEET, NATA, CPT CRASH COURSE
SHREE DEVI TUTORIALS
Below HDFC Bank, M.N. Towers, KADRI, MANGALORE
Ph: 2222396 / 9620421806 www.shreedevitutorials.com

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಬುಧವಾರ, ಮಾರ್ಚ್ 7, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 20+4

CENTRAL LIBRARY
Mangalore-7

# ಮಾ. 9: ಸಹ್ಯಾದ್ರಿ ವಿಜ್‌ಕ್ವಿಜ್ 2018 ಗ್ರ್ಯಾಂಡ್ ಫಿನಾಲೆ

**ಮಹಾನಗರ,** ಮಾ. 6: ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ವ್ಯವಹಾರಿಕ ಆಡಳಿತ (ಎಂಬಿಎ) ಆಶ್ರಯದಲ್ಲಿ 'ಸಹ್ಯಾದ್ರಿ ವಿಜ್‌ಕ್ವಿಜ್ 2018' ಗ್ರ್ಯಾಂಡ್ ಫಿನಾಲೆಯನ್ನು ಮಾ. 9ರಂದು ಕಾಲೇಜಿನಲ್ಲಿ ಆಯೋಜಿಸಲಾಗಿದೆ ಎಂದು ಎಂಬಿಎ ವಿಭಾಗದ ನಿರ್ದೇಶಕಿ ಡಾ। ವಿಶಾಲ್ ಸಮರ್ಥ ಹೇಳಿದರು.

ಮಂಗಳವಾರ ನಗರದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಪದವಿ ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಜಗತ್ತಿನಲ್ಲಿ ಜ್ಞಾನವನ್ನು ರೂಪಿಸುವ ಉದ್ದೇಶ ದಿಂದ ಆರಂಭವಾದ ಸಹ್ಯಾದ್ರಿ ವಿಜ್ ಕ್ವಿಜ್, ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನದೊಂದಿಗೆ ವ್ಯವಹಾರ ಜಗತ್ತು, ಮಾರುಕಟ್ಟೆ ಮಾನವ ಸಂಪನ್ಮೂಲ ಮತ್ತು ಹಣಕಾಸಿಗೆ ಪೂರಕವಾದ ಪರಿಜ್ಞಾನವನ್ನು ರೂಪಿಸುತ್ತದೆ ಎಂದರು.

ವಿಜ್‌ಕ್ವಿಜ್ ಸಂಯೋಜಕಿ ಪ್ರೊ। ಗಾಯತ್ರಿ ಶೆಟ್ಟಿ ಮಾತನಾಡಿ, ಕಾಲೇಜು ಹಂತ ಮತ್ತು ಸಹ್ಯಾದ್ರಿ ಕ್ಯಾಂಪಸ್ ಗ್ರ್ಯಾಂಡ್ ಫಿನಾಲೆ ಎಂಬ ಎರಡು ಹಂತದಲ್ಲಿ ಕ್ವಿಜ್ ನಡೆಯಲಿದೆ. ಮಂಗಳೂರು, ಉಡುಪಿ, ಕೊಡಗು, ಕಾರವಾರ ಮತ್ತು ಕಾಸರಗೋಡು ಜಿಲ್ಲೆಯ ಸುಮಾರು 60 ಪದವಿ ಕಾಲೇಜುಗಳಲ್ಲಿ ಕಳೆದ ತಿಂಗಳು ಕಾಲೇಜು ಹಂತದ ಕ್ವಿಜ್ ನಡೆಸಲಾಯಿತು.

ಅಂತಿಮ ಪದವಿಯ ಮೂರು ವಿದ್ಯಾರ್ಥಿಗಳನ್ನೊಳಗೊಂಡ ಒಂದು ತಂಡದಂತೆ ಸುಮಾರು 7,000 ವಿದ್ಯಾರ್ಥಿಗಳು ಕಾಲೇಜು ಹಂತದಲ್ಲಿ ಭಾಗವಹಿಸಿದ್ದಾರೆ. ಇದರಲ್ಲಿ ಆಯ್ಕೆಗೊಂಡು ಸುಮಾರು 950 ವಿದ್ಯಾರ್ಥಿಗಳು ಸಹ್ಯಾದ್ರಿ ವಿಜ್ ಕ್ವಿಜ್ 2018 ಅಂತಿಮ ಹಂತದಲ್ಲಿ ಭಾಗವಹಿಸಲಿದ್ದಾರೆ. ಫಿನಾಲೇ ವಿಜೇತರು ಪ್ರಥಮ 25,000 ರೂ., ದ್ವಿತೀಯ 15,000 ರೂ., ಮತ್ತು ತೃತೀಯ 10,000 ರೂ., ಬಹುಮಾನ ನೀಡಲಾಗುತ್ತದೆ ಎಂದರು.

ಉದ್ಘಾಟನೆಯನ್ನು ಎಚ್‌ಡಿಎಫ್‌ಸಿ ಲಿ. ಮಂಗಳೂರು ಮತ್ತು ಗೋವಾದ ಬಿಸಿನೆಸ್ ಹೆಡ್ ಕಾಮಕ್ಯ ಪ್ರಸಾದ್ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎ ಆ್ಯಂಡ್ ವೈ ಅಸೋಸಿಯೇಟ್ಸ್ ಎಲ್‌ಎಲ್‌ಪಿ ನಿರ್ದೇಶಕ ಪ್ರದೀಪ್ ಸುರೇಶ್ ಭಾಗವಹಿಸಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಉಪಸಂಯೋಜಕರಾದ ಪ್ರೊ। ರಮೇಶ ಕೆ.ಜಿ., ಪ್ರೊ। ಪದ್ಮನಾಭ ಬಿ. ಉಪಸ್ಥಿತರಿದ್ದರು.


ಮುಂಜಾನೆ ಮಾತು
ಕನಸಿಗೆ ಅಡಚಣೆಯಿಲ್ಲದ ನಿದ್ದೆ ಬೇಕು. ಗುರಿಗೆ ನಿದ್ದೆ ಮಾಡಲಾಗದಷ್ಟು ಶ್ರಮ ಬೇಕು. ಮಲಗಿ ಕನಸು ಕಂಡು ಎದ್ದು ಗುರಿ ತಲುಪೋಣ.

# ವಿಜಯವಾಣಿ

ಕನ್ನಡಿಗರ ಧ್ವನಿ

ನಂ.1 ಕನ್ನಡ ದಿನಪತ್ರಿಕೆ

CENTRAL LIBRARY



ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 6 ● ಸಂಚಿಕೆ 338

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 7 ಮಾರ್ಚ್ 2018 | ಬುಧವಾರ 7

## ಕಾಲಿಂಗ್ ಬೆಲ್ ಅಭಿಯಾನ

**ಮಂಗಳೂರು:** ರಾಜ್ಯದಲ್ಲಿಯೇ ಪ್ರಥಮವಾಗಿ ಸ್ವಚ್ಛತಾ ಗೀತೆಯನ್ನು ಕಾಲಿಂಗ್ ಬೆಲ್‌ನಲ್ಲಿ ಮೊಳಗಿಸಿ ಮನೆಗಳಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸುವ ಮೂಲಕ ಸಾರ್ವಜನಿಕರ ಮನೋಭಾವದಲ್ಲಿ ಬದಲಾವಣೆ ತರುವ ಪ್ರಯತ್ನದ ಅಭಿಯಾನ ಮಾ.8ರಂದು ಕಳ್ಳಿಗೆ ಗ್ರಾಮದಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವ ರಮಾನಾಥ ರೈ ಮನೆಯಿಂದ ಆರಂಭಗೊಳ್ಳಲಿದೆ. ಕಳ್ಳಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 1127 ಮನೆಗಳಿಗೆ ಮಂಗಳಾದೇವಿ ರಾಮಕೃಷ್ಣ ಮಿಷನ್ ಮತ್ತು ಅಡ್ಯಾರು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಸಹಯೋಗದೊಂದಿಗೆ ಕಾಲಿಂಗ್ ಬೆಲ್ ಅಳವಡಿಸಲು ಯೋಜನೆ ರೂಪಿಸಲಾಗಿದೆ. ಸ್ವಚ್ಛತಾ ಅಭಿಯಾನದಲ್ಲಿ ಅಳವಡಿಸಿರುವ ಗೀತೆಯನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಡಾ.ಎಂ.ಆರ್.ರವಿ ರಚಿಸಿದ್ದು, ರಫೀಕ್ ಖಾನ್ ಸಂಗೀತ ಸಂಯೋಜಿಸಿದ್ದಾರೆ. ಶೈನಿ ಪಿರೇರಾ ಮತ್ತು ಕೀರ್ತನ್ ಹೊಳ್ಳ ಗೀತೆ ಹಾಡಿದ್ದಾರೆ ಎಂದು ಜಿಪಂ ಪ್ರಕಟಣೆ ತಿಳಿಸಿದೆ.